ಓ.ಎಸ್. ನಂ. 53/2014

ಪಿ.ಡಬ್ಲ್ಯೂ: 01 (Ramanna)

**ದಿನಾಂಕ: 24.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ 3 -10 ಪರ – ಶ್ರೀ TMS ವಕೀಲರಿಂದ.**

ಜಿ.ಕೆ ಪೆನ್ನಯ್ಯ ಅವರ ತಂದೆಯ ಹೆಸರು ಕರಿಗಂಗಣ್ಣ. ಅವರು 3 ಮತ್ತು 4ನೇ ಪ್ರತಿವಾದಿಯ ತಂದೆ ಎಂದರೆ ಹೌದು. ಕರಿಗಂಗಣ್ಣನಿಗೆ ತಿಪ್ಪೇಸ್ವಾಮಿ, ಎಲ್ಲಪ್ಪ ಮತ್ತು ಒಡಕಪ್ಪ ಎಂಬ ಸಹೋದರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅವರುಗಳ ತಂದೆಯ ಹೆಸರು ಕಂಬಯ್ಯ ಎಂದರೆ ನನಗೆ ಗೊತ್ತಿಲ್ಲ. ಕಂಬಯ್ಯನ ಹೆಸರು ದಿಬ್ಬದಳ್ಳಿ ಲಿಂಗಯ್ಯ ಎಂದರೆ ನನಗೆ ಗೊತ್ತಿಲ್ಲ.

5ನೇ ಪ್ರತಿವಾದಿಯ ಗಂಡನ ಹೆಸರು ಒಡಕಪ್ಪ ಎಂದರೆ ನನಗೆ ಗೊತ್ತಿಲ್ಲ. 6ನೇ ಪ್ರತಿವಾದಿಯ ಗಂಡನ ಹೆಸರು ಎಲ್ಲಪ್ಪ ಎಂದರೆ ನನಗೆ ಗೊತ್ತಿಲ್ಲ.10ನೇ ಪ್ರತಿವಾದಿಯೂ ಗೊತ್ತಿಲ್ಲ ಮತ್ತು ಆತನ ತಂದೆಯ ಹೆಸರು ಗೊತ್ತಿಲ್ಲ. 10 ನೇ ಪ್ರತಿವಾದಿಯ ಹೆಸರು ಗಂಗಾಧರ ಎಂದರೆ ನನಗೆ ಗೊತ್ತಿಲ್ಲ. ಗಂಗಾಧರ ರವರ ತಂದೆಯ ಹೆಸರು ತಿಪ್ಪೇಸ್ವಾಮಿ ಎಂದರೆ ನನಗೆ ಗೊತ್ತಿಲ್ಲ. ವಾದಿ, 1 ಮತ್ತು 2 ಪ್ರತಿವಾದಿ, 3 ರಿಂದ 10 ಪ್ರತಿವಾದಿರವರ ಕುಟುಂಬಕ್ಕೆ ಸಂಬಂಧ ಇಲ್ಲ. ದಾವ ಆಸ್ತಿಗಳು ದಿಬ್ಬದಳ್ಳಿ ಲಿಂಗಯ್ಯರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ.

ದಾವ ಆಸ್ತಿಗಳ ರಿಸೆಟಲಮೆಂಟ್ ರಿಜಿಸ್ಟರ್ ನನ್ನ ಮುತ್ತಜ್ಜಿಯಾದ ಲಕ್ಕಮ್ಮ, ಲಿಂಗವ್ವ, ಮುತ್ತಾತನಾದ ಪಾತಯ್ಯ ರವರ ಹೆಸರಿನಲ್ಲಿ ಇದೆ. ರಿಸೆಟಲಮೆಂಟ್ ರಿಜಿಸ್ಟರ್‌ನಲ್ಲಿ ಇರುವ ಪಾತಯ್ಯಗಾರಿ ದಿಬ್ಬದಳ್ಳಿ ಲಿಂಗಯ್ಯ 3 ರಿಂದ 10 ನೇ ಪ್ರತಿವಾದಿಗಳ ಮೂಲಪುರುಶ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಲಕ್ಕಮ್ಮ ಮತ್ತು ಲಿಂಗವ್ವ, ರವರ ತಮ್ಮನ ಹೆಸರು ದಿಬ್ಬದಳ್ಳಿ ಲಿಂಗಯ್ಯ. ಆ ಬಗ್ಗೆ ನಾನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ.

ಕಂಬಯ್ಯ ಎಂಬುವವರು ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ ಎಂದರೆ ಹೌದು. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ಕಂಬಯ್ಯನ ಹೆಸರು 1968 ರಿಂದ ಕಾಣುತ್ತಿದೆ ಎಂದರೆ ಆ ರೀತಿ ಬರೆಸಿರಬಹುದು ಆದರೆ ನನಗೆ ಗೊತ್ತಿಲ್ಲ. ಆ ರೀತಿ ಯಾರು ಬರೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆ ರೀತಿ 1968 ರಿಂದ ಪಹಣಿಯಲ್ಲಿ ಹೆಸರು ಇರುವುದು ನನಗೆ ಗೊತ್ತಿತ್ತು ಎಂದರೆ ಗೊತ್ತಿರಲಿಲ್ಲ. ನನಗೆ 8-10 ವರ್ಷದಿಂದ ಗೊತ್ತಾಗಿದೆ. ಆ ರೀತಿ ಕಂಬಯ್ಯನ ಹೆಸರನ್ನು ಕಂಬಯ್ಯನ ವಂಶಸ್ತರು ಬರೆಸಿರಬಹುದು. ಅದನ್ನು ನಾನು ಪ್ರಶ್ನಿಸಿರುವುದಿಲ್ಲ. ಕಂಪ್ಯೂಟರ್ ಪಹಣಿಯಲ್ಲಿ ನಮ್ಮ ಅಣ್ಣ-ತಮ್ಮಂದಿರ ಹೆಸರು ಇದೆ. ಗೌರಮ್ಮ ಗಂಡ ಗಂಗಾಧರ 10 ನೇ ಪ್ರತಿವಾದಿಯ ತಾಯಿ ಎಂದರೆ ನನಗೆ ಗೊತ್ತಿಲ್ಲ. ಜಿ.ಕೆ ತಿಪ್ಪೆಸ್ವಾಮಿ ತಂದೆ ಕರಿಯಣ್ಣ 4ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ.ಕೆ. ಎಲ್ಲಪ್ಪ ತಂದೆ ಆರ್.ಕಂಬಯ್ಯ 6ನೇ ಪ್ರತಿವಾದಿಯ ಗಂಡ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಜಿ.ಹೆಚ್. ಹನುಮಕ್ಕ

ಓ.ಎಸ್. ನಂ. 53/2014

ಪಿ.ಡಬ್ಲ್ಯು: 01 (Ramanna)

ಗಂಡ ಒಡಕಪ್ಪ 5ನೇ ಪ್ರತಿವಾದಿಯ ಗಂಡ ಎಂದರೆ ನನಗೆ ಗೊತ್ತಿಲ್ಲ. ಆರ್. ಕಂಬಯ್ಯರವರು ಮೃತಪಟ್ಟ ನಂತರ 2005-2006 ರ ಪಹಣಿಯಲ್ಲಿ ಮೇಲೆ ಹೇಳಿದವರ ಹೆಸರಿಗೆ ದಾವ ಆಸ್ತಿ ವರ್ಗಾವಣೆಯಾಗಿದೆ ಎಂದರೆ ಅವರುಗಳು ಆ ರೀತಿ ಸೇರಿಸಿಕೊಂಡಿರಬಹುದು. ಸದರಿ ಅವರ ಹೆಸರುಗಳು ಪಹಣಿಯಲ್ಲಿ ಇರುವುದು ನನಗೆ ಗೊತ್ತಿಲ್ಲ. ಅವರ ಹೆಸರು ಯಾವ ರೀತಿ ಪಹಣಿಯಲ್ಲಿ ಬಂದಿದೆ ಎಂದು ಪರಿಶೀಲನೆ ಮಾಡಿರುವುದಿಲ್ಲ. ಅದನ್ನು ನಾನು ಪ್ರಶ್ನಿಸಿರುವುದಿಲ್ಲ. ದಾವ ಆಸ್ತಿಗಳು 3 ರಿಂದ 10ನೇ ಪ್ರತಿವಾದಿಗಳ ವಂಶಸ್ಥರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವ ಆಸ್ತಿಗಳು ವಾದಿ ಹಾಗೂ 01 ಮತ್ತು 02ನೇ ಪ್ರತಿವಾದಿಗಳ ವಂಶಸ್ಥರಿಗೆ ಸೇರಿದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. 01 ಮತ್ತು 02ನೇ ಪ್ರತಿವಾದಿಗಳು ಹಾಗೂ ನಾವು ವಿಭಾಗ ಆಗಿರುವುದಿಲ್ಲ. ದಾವ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇಲ್ಲ. ನಮ್ಮ ಸ್ವಂತ ದುಡಿದ ಮನೆಗಳಲ್ಲಿ ವಾಸಿಸುತ್ತಿದ್ದೇವೆ, ಅವುಗಳನ್ನು ಭಾಗ ಮಾಡಿಲ್ಲ ಹಾಗೂ ಈ ದಾವೆಯಲ್ಲಿ ಸೇರಿಸಿಲ್ಲ.

ನಾವು ಹಾಗೂ 1 ಮತ್ತು 2 ಪ್ರತಿವಾದಿಗಳು ಚೆನ್ನಾಗಿದ್ದೇವೆ. ದಾವ ಆಸ್ತಿಗಳನ್ನು 3 ರಿಂದ 10ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನಾವು ಹಾಗೂ 1 ರಿಂದ 2 ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದೇವೆ. ನಮಗಾಗಲೀ 1 ರಿಂದ 2 ಪ್ರತಿವಾದಿಗಳಿಗಾಗಲೀ ದಾವ ಆಸ್ತಿಯಲ್ಲಿ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 3 ರಿಂದ 10 ಪ್ರತಿವಾದಿಗಳು ಹಾಕಿರುವ ತಕರಾರಿನಲ್ಲಿ ಏನು ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವೆಯಲ್ಲಿ 3 ರಿಂದ 10 ನೇ ಪ್ರತಿವಾದಿಯರ ಹೆಸರು ಮತ್ತು ವಿಳಾಸಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅವರ ಹೆಸರುಗಳನ್ನು ಯಾವ ಆಧಾರ ಮೇಲೆ ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಗಳು 3 ರಿಂದ 10ನೇ ಪ್ರತಿವಾದಿಗಳಿಗೆ ಸೇರಿರುತ್ತದೆ, ನಮಗೂ ಮತ್ತು 1 ಮತ್ತು 2 ನೇ ಪ್ರತಿವಾದಿಗಳಿಗೆ ಸೇರಿರುವುದಿಲ್ಲ, ನಾವು ಹಾಗೂ 1 ಮತ್ತು 2ನೇ ಪ್ರತಿವಾದಿಗಳು ಶಾಮಿಲಾಗಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.